ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 14ನೇ ಅಕ್ಟೋಬರ್ 1884.

ಮಾಹೆ ಗುಜಸ್ತಾ 1ನೇ ಮರ್ಕುಮಿನ ರಾತ್ರಿ ಜಂಕೀಪುರ–ಶಿವಮೊಗ್ಗಾ ರಸ್ತೆಯಲ್ಲಿ ಟಪ್ಪಾಲ್ ಚೋರಿ ನಡಸಿದ ಜನಗಳ ಪತ್ತೇ ಬಗ್ಯೆ ಅನುಕೂಲವಾದ ವರ್ತಮಾನವನ್ನು ಕೊಡುವವರಿಗೆ 50 ರೂಪಾಯಿಗಳ ಇನಾಂ ಕೊಡಲ್ಪಡುವದು.

ಇದರಡೀ ತಪಸೀಲ್ ಕಂಡ ಮಾಲ್‌ಗಳು ಚೋರಿ ಹೋಗಿರುವಂತೆ ರಿಪೋರ್ಟುಗಿರುತ್ತೆ:–

ಭಾಂಗೀ ನಂಬರ್ 1.

	ರೂ.	ಆ.	ಪೈ.
ಸುಮಾರು 25 ವರಹಾ ತೂಕದ ಅಡ್ಡಿಕೆ ಕೆಂಪು ಬಂಣದ ತಲೆ ಪಾಕಿಟ್	130	0	0
ಹೊಸಧಾರವಲ್ಲಿ ಪೋಣಿಸಿದ ಭಂಗಾರದ ಗುಂಡಿನ 46 ಗುಂಡು 1 ಹವಳ ಪೋಣಿಸಿರುತ್ತೆ, ಸುಮಾರು 18 ರೂಪಾಯಿ ತೂಕ	100	0	0
ಭಂಗಾರದ ಬಾವಲಿ ಸುತ್ತಲೂ ಹಳೇಮುತ್ತು ಹಾಕಿರುತ್ತೆ	20	0	0
ಬಳ್ಳೀ ಪಾಡಗ, ಮಕ್ಕಳ ಬಾಬತು	5	0	0

ಭಾಂಗೀ ನಂಬರ್ 2.

ಬಂದು ಜೊತೆ ಹೊಸಧೋತ್ರ	10	0	0

ಸೈಯದ್ ನಸಿರುದ್ದೀನ್,
ಫಾರ್ ಜೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 27ನೇ ಅಕ್ಟೋಬರ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಯಡೆಹಳ್ಳಿ ಟವನಿನಲ್ಲಿರುವ ನೇರ್ಲೆ ಪುಟ್ಟಯ್ಯನ ಜವಳಿ ಅಂಗಡಿಗೆ ಮಾಹೆ ಮಜಕೂರು ತಾರೀಖು 16ನೇ ರಾತ್ರಿ ಪ್ರವೇಶಿಸಿ ರೂಪಾಯಿ 782—10—0 ಕಿಮ್ಮತಿನ ಫಖ್ತ್ ಜವಳಿಯನ್ನು ಕಳವುಮಾಡಿಕೊಂಡು ಹೋದ ಕಳ್ಳನ ಅಥವಾ ಕಳ್ಳರ ದಸ್ತಗಿರಿ ಬಗ್ಯೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕುಂಪಣಿ ಯಿರಡನೂರು ರೂಪಾಯಿ ಇನಾಂ ಕೊಡಲ್ಪಟ್ಟ್ಯೇತು.

ತಾರೀಖು 3ನೇ ಅಕ್ಟೋಬರ್ 1884.

ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಸರ್ಕಾರೀ ಬಂಜರ್ ಜಂಗಲ್ ತಾಕು, ಕಾಫೀ ಸಾಗುವಳಿಗಾಗಿ ಕಾಯಂ ದರಕ್ಕೆ ಕೊಟ್ಟೊರ್ಡಿ ಯಸ್ಟೇಟಿನ ಮೆ॥ ಯಫ್. ಎಸ್. ಹೇಯವರಿಂದ ದರಖಾಸ್ತು ಮಾಡಲ್ಪಟ್ಟಿರುವದರಿಂದ, 1884ನೇ ಇಸವಿ ಡಿಸಂಬರ್ 1ನೇ ಮರ್ಕುಮಿನಲ್ಲಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರ ಪುರದ ಮೊಕ್ಕಾಮಿನಲ್ಲಿ, ಸದರೀ ತಾಕಿಗೆ ಐಯಿಂದ ಗೊತ್ತು ಮಾಡಲ್ಪಡಬಹುದಾದ ಕಂದಾಯ ತೆರುವ ಬಗ್ಯೂ ಮತ್ತು ಆವಶ್ಯಕವಾಗಿರಬಹುದಾದ ಯಾವದಾದರೂ ಮಾರ್ಗ ಮತ್ತು ಜಲಾಧಾರ ವಗ್ಯೆರೇ ಹಕ್ಕುಗಳಿಗೆ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪಡೆಯುವ ಚಡ ದರಖಾಸ್ತುದಾರನು ಕ್ರಯದ ಮೊಬಲಗ್ ಪೈಕೀ ಶೇಕಡಾ 25ರ ಪ್ರಕಾರ ಆಗುವ ಮೊಬಲಗನ್ನು ಹರಾಜ್ ಕೈದಾದ ಕೂಡ್ಲೆ ಡಿಪಾಜಿಟ್ ಯಿಡಲ್ಪಟ್ಟು ಬಾಕೀ ಮೊಬಲಗು ಆ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು; ಸಾಗೆ ಪಾವತೀ ಮಾಡದೆ ತಪ್ಪಿದಲ್ಲಿ ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

3. ಚಡ ದರಖಾಸ್ತುದಾರನು ಕೂಡ್ಲೆ ಶೇಕಡಾ 25ರ ಪ್ರಕಾರ ಡಿಪಾಜಿಟ್ ಮೊಬಲಗನ್ನು ಯಿಡುವದಕ್ಕಾಗಲೀ ಬಾಕೀ ಮೊಬಲಗನ್ನು 15 ದಿನಗಳೊಳಗಾಗಿ ಕೊಡಲಿಕ್ಕಾಗಲೀ ತಪ್ಪಿದರೆ ಸದರೀ ಜಮೀನು ಚಡ ದರಖಾಸ್ತುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಶ್ಚ ಹರಾಜು ಹಾಕಲ್ಪಡುವದು.

4. ಜಮೀನ್ ಕ್ರಯವು ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ತನಕ ಆಖೈರಾದ್ದಾಗಿರತಕ್ಕದ್ದಲ್ಲ.

5. ಜಮೀನಿನ ತಪಸೀಲಿನಲ್ಲಾಗಲೀ ಅಥವಾ ಅಂದಾಜಾ ಬೀಜವರೀಯಲ್ಲಾಗಲೀ ಯಿರುವ ಗಲ್ಲತಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು. ಇತರ ಹೆಚ್ಚಿಗೆ ತಪಸೀಲುಗಳು ಹರಾಜು ಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದು.

6. ದರಖಾಸ್ತು ಮಾಡಲ್ಪಟ್ಟ ಜಂಗಲ್ ತಾಕು ಈ ಕೆಳಗೆ ಕಂಡ ಚಕ್ಕುಬಂದಿಯಲ್ಲಿ ಅಡಗಿರುತ್ತೆ. ದರಖಾಸ್ತುದಾರನ ಖಾಯಿಷ್‌ನಂತೆ ಸರ್ವೇ ಇಲಾಖೆಯವರಿಂದ ಸದರೀ ಜಮೀನ್ ಸರ್ವೇ ಮಾಡಲ್ಪಟ್ಟು ಬಾಂದು ಗುರ್ತುಗಳು ಹಾಕಲ್ಪಟ್ಟಿರುತವೆ, ಆದರೆ ಸರ್ವೆ ಮ್ಯಾಪ್ ತಲ್ಪಿರುವದಿಲ್ಲವಾಗಿ ಕೊಡಲ್ಪಟ್ಟ ಚಕ್ಕುಬಂದಿ ವ ಬೀಜವರೀ ಅಂದಾಜಾ ಆಗಿರುತ್ತೆ.